**56ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ನಗರ**

**ಇದೇ ದಿನಾಂಕಃ 29 ನೇ ಆಗಸ್ಟ್ 2024 ರಂದು**

**ಎಸ್.ಸಿ.ಸಂಖ್ಯೆಃ 972/2023**

**ಫಿರಾದಿದಾರರುಃ** ಃ ಕರ್ನಾಟಕ ಸರ್ಕಾರದ ಪರವಾಗಿ
ಬೆಂಗಳೂರು ನಗರ ರೈಲ್ವೆ ಪೊಲೀಸ್ ಠಾಣೆ,
ಬೆಂಗಳೂರು.

**:ವಿರುದ್ದ:**

**ಆರೋಪಿತರು** ಃ ಮೆಹಬೂಬ್ ಅಹ್ಮದ್ ಅಲಿ ಸಯ್ಯದ್
ಮತ್ತು ಇತರರು

**ಃ ದೋಷಾರೋಪಣೆ ಃ**

ಶ್ರೀ.ಜೈಶಂಕರ್, 56ನೇ ಅಪರ ಸಿಟಿ ಸಿವಿಲ್ ಮತ್ತು ಸೆಷೆನ್ಸ್ ನ್ಯಾಯಾಧೀಶರು ನಿನ್ನ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

**ಆರೋಪಿ ನಂ.2 ಃ**
ಸುನಿಲ್ ಅಲಿಯಾಸ್ ಸುನಿಲ್ ಕುಮಾರ್
ಅಲಿಯಾಸ್ ರಾಜೇಶ್,
ಬಿನ್ ಲೇಟ್ ತಿಪ್ಪೇಸ್ವಾಮಿ,
27 ವರ್ಷಗಳು, ನಂ.30,
ವಾರ್ಡ್ ಸಂಖ್ಯೆ 13, ವಡ್ಡರ ಬಂಡೆ,
ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರ,
ಬಳ್ಳಾರಿ.

ಆರೋಪಿ ನಂ.4
ರಂಗಸ್ವಾಮಿ ಬಿನ್ ಮುನಿರಾಜು,
37 ವರ್ಷಗಳು, ನಂ.760, 10 ನೇ ಕ್ರಾಸ್,
ಮಾಲೂರು ದಿಣ್ಣೆ, ತುಮಕೂರು.

ಆರೋಪಿ ನಂ.5
ಸತೀಶ್ ಅಲಿಯಾಸ್ ಸತೀಶ್ ಕಿಶನ್ ಬಾಂಗ್ರೆ,
ಬಿನ್ ಕಿಶನ್ ಬಾಂಗ್ರೆ, 24 ವರ್ಷಗಳು,
ಮಾವೇಶಿ ಗ್ರಾಮ ಮತ್ತು ಅಂಚೆ,
ಅಕೋಲೆ ತಾಲ್ಲೂಕು, ಅಹ್ಮದ್ ನಗರ,
ಮಹಾರಾಷ್ಟ್ರ.

...........

ದಿಃ19.12.2015 ರಂದು ಬೆಳಗ್ಗೆ 5.00 ಗಂಟೆ ಸಮಯದಲ್ಲಿ ಬೆಂಗಳೂರು ನಗರ ರೈಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯ ಮಲ್ಲೇಶ್ವರಂ ರೈಲ್ವೆ ನಿಲ್ದಾಣದ ಔಟರ್ ಸಿಗ್ನಲ್ ಹತ್ತಿರ ಸ್ವತಂತ್ರಪಾಳ್ಯ ಕಡೆಗೆ ಹೋಗುವ ಕಾಲು ದಾರಿಯಲ್ಲಿ ನೀವುಗಳು ಈ ಪ್ರಕರಣದಿಂದ ಬೇರ್ಪಟ್ಟ 1 ಮತ್ತು 3 ನೇ ಆರೋಪಿತರೊಂದಿಗೆ ಸೇರಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಆಯಧಗಳನ್ನು ತೋರಿಸಿ, ಬೆದರಿಸಿ ಬೆಲೆ ಬಾಳುವ ವಡವೆಗಳು ಮತ್ತು ಹಣವನ್ನು ದರೋಡೆ ಮಾಡಲು ತಯಾರಿ ಮಾಡಿಕೊಂಡಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 399 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪಣೆ ಇದ್ದು ಸದರಿ ಅಪರಾಧವು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ.

ಮೇಲ್ಕಂಡ ದಿವಸ ಸಮಯ ಮತ್ತು ಸ್ಥಳದಲ್ಲಿ ನೀವುಗಳು ಈ ಪ್ರಕರಣದಿಂದ ಬೇರ್ಪಟ್ಟ 1 ಮತ್ತು 3 ನೇ ಆರೋಪಿತರೊಂದಿಗೆ ಸೇರಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಆಯಧಗಳನ್ನು ತೋರಿಸಿ, ಬೆದರಿಸಿ ಬೆಲೆ ಬಾಳುವ ವಡವೆಗಳು ಮತ್ತು ಹಣವನ್ನು ದರೋಡೆ ಮಾಡಲು ಹೊಂಚು ಹಾಕುತ್ತಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 402

ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪಣೆ ಇದ್ದು ಸದರಿ ಅಪರಾಧವು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ.

ಈ ಮೂಲಕ ನಾನು ನಿಮ್ಮನ್ನು ಮೇಲ್ಕಂಡ ಆರೋಪಣೆಗೆ ಗುರಿಪಡಿಸಿರುತ್ತೇನೆ.

ಇದೇ ದಿನಾಂಕ 29 ಆಗಸ್ಟ್ 2024 ರಂದು.

**(ಜೈಶಂಕರ್)**
೫೬ನೇ ಅಪರ ಸಿಟಿ ಸಿವಿಲ್ ಮತ್ತು ಸೆಷೆನ್ಸ್
ನ್ಯಾಯಾಲಯ, ಬೆಂಗಳೂರು.

**56ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ನಗರ**

**ಇದೇ ದಿನಾಂಕಃ 29 ನೇ ಆಗಸ್ಟ್ 2024 ರಂದು**

**ಎಸ್.ಸಿ.ಸಂಖ್ಯೆಃ 972/2023**

**ಫಿರಾದಿದಾರರುಃ** ಃ ಕರ್ನಾಟಕ ಸರ್ಕಾರದ ಪರವಾಗಿ
ಬೆಂಗಳೂರು ನಗರ ರೈಲ್ವೆ ಪೊಲೀಸ್ ಠಾಣೆ,
ಬೆಂಗಳೂರು.

**:**ವಿರುದ್ದ**:**

**ಆರೋಪಿತರು** ಃ ಮೆಹಬೂಬ್ ಅಹ್ಮದ್ ಅಲಿ ಸಯ್ಯದ್
ಮತ್ತು ಇತರರು

**ಃ ಆಪಾದನೆ ಃ**

ಪ್ರಶ್ನೆ 1ಃ ಈಗ ಓದಿ ಹೇಳಲಾದ ದೋಷಾರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆ 2 ಃ ಮೇಲ್ಕಂಡ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ನಿಮ್ಮ ವಿರುದ್ಧ ವಿಚಾರಣೆಯಾಗಬೇಕೋ?

ಉತ್ತರ ಃ

2 ನೇ ಆರೋಪಿತನ ಸಹಿಃ

4 ನೇ ಆರೋಪಿತನ ಸಹಿಃ

5 ನೇ ಆರೋಪಿತನ ಸಹಿಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ತಿಳಿಸಿ ಅವರ ಉತ್ತರವನ್ನು ಕನ್ನಡದಲ್ಲಿ ದಾಖಲು ಮಾಡಿಕೊಳ್ಳಲಾಯಿತು ಎಂದು ನಾನು ಈ ಮೂಲಕ ದೃಢೀಕರಿಸಿರುತ್ತೇನೆ.)

ಇದೇ ದಿನಾಂಕಃ 29 ನೇ ಆಗಸ್ಟ್ 2024 ರಂದು.

(ಜೈಶಂಕರ್)
೫೭ನೇ ಅಪರ ಸಿಟಿ ಸಿವಿಲ್ ಮತ್ತು ಸೆಷೆನ್ಸ್
ನ್ಯಾಯಾಲಯ, ಬೆಂಗಳೂರು.